ಹಂಡೆಯೊಲೆಗೆ ಒಡ್ಡಿದ ತುಸು ಹಸಿಯಾಗಿಯೇ ಇದ್ದ ಕಟ್ಟಿಗೆ 'ಸರ್ರ್' ಎಂದು ಸದ್ದು ಮಾಡುತ್ತಾ ಉರಿಯುತ್ತಿತ್ತು. ತನ್ನನ್ನೇ ಬೆಂಕಿಗೊಡ್ಡುತ್ತಾ ಮನೆ ಮಂದಿಗೆಲ್ಲಾ ದಿನಪೂರ್ತಿ ಬಿಸಿ ನೀರು ಒದಗಿಸುವ ಹಂಡೆಯೆಂದರೆ ಪೂಜಾಳಿಗೆ ಬಾಲ್ಯದಿಂದಲೇ ಅದೇನೋ ವಿಚಿತ್ರ ಆಕರ್ಷಣೆ. ಪೂರ್ತಿ ಕಪ್ಪಾಗಿರುವ ಅದರ ತಳ, ಸದಾ ಬೆಂಕಿಯುಗುಳುವ ಕಟ್ಟಿಗೆ, ಮುಟ್ಟಿದರೆ ಕೈ ಸುಟ್ಟು ಹೋಗುವಷ್ಟು ಬಿಸಿ ಇರುವ ಅದರ ಮುಚ್ಚಳ, ಹಬೆಯಾಡುವ ನೀರು... ಇವೆಲ್ಲಾ ಮೊದಲಿನಿಂದಲೂ ಅವಳಲ್ಲಿ ಒಂದು ವಿಲಕ್ಷಣ ಆಸಕ್ತಿಯನ್ನು ಹುಟ್ಟುಹಾಕುತ್ತಿತ್ತು. ಈಗಲೂ ಅಷ್ಟೆ; ರಜೆಗೆಂದು ಹಾಸ್ಟೆಲ್‌ನಿಂದ ಊರಿಗೆ ಬಂದಾಗಲೆಲ್ಲಾ ಅವಳು ನೀರೊಲೆಯ ಮುಂದೆ ಕೂತು ಉರಿವ ಒಲೆಯನ್ನೂ, ನಿಗಿ ನಿಗಿ ಕೆಂಡವನ್ನೂ, ಹೊಳೆವ ಬೆಳಕನ್ನೂ, ಮತ್ತದೇ ಹಂಡೆಯನ್ನು ನೋಡುತ್ತಾ ಮೈ ಕಾಸಿಕೊಳ್ಳುತ್ತಿದ್ದಳು.

ಇಂದೂ ಅಷ್ಟೇ, ಮಾಗಿಯ ಚಳಿಯ ಸ್ತಬ್ಧ ಮುಂಜಾವಿನಲ್ಲಿ, ಮಂಜು ಮುಸುಕಿದ ಆಕಾಶವನ್ನೂ, ಇನ್ನೂ ಕಣ್ಣು ಬಿಡದ ಸೂರ್ಯನನ್ನೂ, ಇಬ್ಬನಿ ತಬ್ಬಿದ ಹಾದಿಯ ವಿಹಂಗಮತೆಯನ್ನೂ ಕಣ್ಣಿನ ಪೂರ್ತಿ ತುಂಬಿಕೊಂಡು ಕುಳಿತಿದ್ದಳು. ಅಮ್ಮ ಆಗಷ್ಟೇ ದೇವರ ಮನೆಯಲ್ಲಿ ಕೂತು 'ಯಾಕುಂದೇದು ತುಷಾರ ಹಾರ ಧವಳಾ' ಶುರುವಿಟ್ಟುಕೊಂಡಿದ್ದರು. ಅಮ್ಮನ ಸುಪ್ರಭಾತದ ಸ್ವರವನ್ನೂ ಮೀರಿಸುವಂತೆ 'ಅಮ್ಮೋರೇ' ಎಂದು ಕರೆಯುವುದು ಕೇಳಿಸಿತು. ಅತ್ತ ತಿರುಗಿದ ಪೂಜಾಳ ಹೊಗೆ ತುಂಬಿದ ಕಣ್ಣುಗಳಿಗೆ ಕೆಲಸದಾಳು ನಂಜಪ್ಪ ತನ್ನ ಹರಕು ಪಂಚೆಯನ್ನು ಮಂಡಿಗಿಂತಲೂ ಮೇಲಕ್ಕೆ ಎತ್ತಿ ಕಟ್ಟಿ, ಹಿಮ್ಮಡಿ ಪೂರ್ತಿ ಸವೆದು ಹೋದ ಚಪ್ಪಲಿ ಧರಿಸಿ ಹಿತ್ತಲಿನಿಂದ ಮಾರು ದೂರ ನಿಂತಿರುವುದು ಕಾಣಿಸಿತು. ಸಣ್ಣದಾದ ಅಸಹನೆಯೊಂದು ಅವಳ ಮನಸ್ಸಲ್ಲಿ ಹಾದು ಹೋಯಿತು.

ಮರುಕ್ಷಣ ಮೊಬೈಲ್ ರಿಂಗಣಿಸತೊಡಗಿತು. ಆ ಕಡೆಯಿಂದ ವಾರಪತ್ರಿಕೆಯ ಸಂಪಾದಕರು 'ಮೇಡಂ, ವಿಶೇಷಾಂಕದ ಕಥೆ ನಿನ್ನೆಯೇ ತಲುಪಬೇಕಿತ್ತು, ಆದ್ರೆ ಇನ್ನೂ ತಲುಪಿಲ್ಲವಲ್ಲಾ' ಅಂದರು. ಪೂಜಾ ತಡವರಿಸುತ್ತಲೇ 'ಇವತ್ತು ಸಂಜೆ ತಲುಪುತ್ತೆ ಸರ್' ಅಂತಂದು ಕರೆ ಕಟ್ ಮಾಡಿ ನಾನಿನ್ನೂ ಕಥೆ ಬರೆದೇ ಇಲ್ಲ, ಇನ್ನು ಸಂಪಾದಕರಿಗೆ ತಲುಪಿಸುವುದಾದರೂ ಹೇಗೆ? ಕಳೆದ ವರ್ಷವಷ್ಟೇ ಉತ್ತಮ ಯುವ ಕಥೆಗಾರ್ತಿ ಪ್ರಶಸ್ತಿ ಪಡೆದಿದ್ದೆ, ಈಗ ಕಥೆಗೆ ವಸ್ತು ಹೊಳೆದಿಲ್ಲ ಎಂದರೆ ನನ್ನ ಪ್ರತಿಷ್ಠೆ ಏನಾಗಬೇಕು ಎಂದು ಯೋಚಿಸುತ್ತಾ ಕುಳಿತಳು.

ಕಳೆದೆರಡು ವಾರಗಳಿಂದಲೂ ಹೀಗೆಯೇ. ಏನನ್ನೂ ಬರೆಯಲಾಗುತ್ತಿಲ್ಲ, ಅದೆಷ್ಟೇ ಯೋಚಿಸಿದರೂ ಏನೂ ಹೊಳೆಯುತ್ತಿಲ್ಲ. ಅದೇ ಕಿಟಕಿ, ಅದೇ ಆಕಾಶ, ಅದೇ ಸದ್ದು ಗದ್ದಲ, ಉದ್ದಕ್ಕೆ ಮಲಗಿಕೊಂಡಿರೋ ರಸ್ತೆ, ಮಾಸಲು ಜನ, ಬೀಡಾಡಿ ದನಗಳು ಥೂ! ಎಲ್ಲಾದರೂ ಪ್ರಶಾಂತ ಜಾಗಕ್ಕೆ ಹೋದರೆ ಕಥೆ ಹೊಳೆದೀತೇನೋ ಅನ್ನಿಸಿ ಚಪ್ಪಲಿ ಮೆಟ್ಟಿ 'ಅಮ್ಮಾ, ದೇವಸ್ಥಾನಕ್ಕೆ ಹೋಗಿ ಬರುತ್ತೇನೆ' ಅಂತಂದು ಮನೆಯಿಂದ ಹೊರಗಡಿಯಿಟ್ಟವಳು, ಏನು ಬರೆಯಲಿ? ಹೇಗೆ ಬರೆಯಲಿ? ಎಲ್ಲಿಂದ ಶುರು ಮಾಡಲಿ ಎಂದೆಲ್ಲಾ ಯೋಚಿಸುತ್ತಲೇ ಶಿವ ಮಂದಿರ ತಲುಪಿದಳು.

ಅಲ್ಲಿ ಮತ್ತದೇ ಜನಜಂಗುಳಿ, ಅದೇ ಧಾವಂತ. ಪ್ರಸಾದಕ್ಕಾಗಿ ಆಸೆ ಕಣ್ಣಿಂದ ಕಾಯುತ್ತಾ ಕುಳಿತ ಬಸುರಿ, ಅಲ್ಲೇ ಪಕ್ಕದಲ್ಲಿ ಜಾರುತ್ತಿದ್ದ ಚೆಡ್ಡಿಯನ್ನು ಮತ್ತೆ ಮತ್ತೆ ಮೇಲಕ್ಕೆಳೆದುಕೊಳ್ಳುತ್ತಾ ಭಿಕ್ಷೆ ಬೇಡುವ ಹುಡುಗ, ಮಗುವನ್ನು ಕಂಕುಳಲ್ಲೆತ್ತಿಕೊಂಡು ಆರ್ದ್ರ ನೋಟ ಬೀರುವ ಪುಟ್ಟ ಬಾಲಕಿ, ಭಕ್ತರು ಕೊಡುವ ಪುಡಿಗಾಸಿಗಾಗಿ ಮುಂದೆ ನೋಡುತ್ತಾ ಚಪ್ಪಲಿ ಕಾಯುತ್ತಿದ್ದ ಮುದುಕ... ಪೂಜಾಳಿಗೆ ಅಸಹ್ಯ ಹೊಟ್ಟೆಯಾಳದಿಂದ ಎದ್ದು ಬಂತು. ನಾನೇನೋ ಇಲ್ಲಿ ಕಥೆ ಹುಡುಕಲೆಂದು ಬಂದೆ. ಆದ್ರೆ ಇಲ್ಲಿ ನೋಡಿದರೆ, ದೇವರಿಗೇ ಶಾಂತಿಯಿಲ್ಲ ಎಂಬಂತಾಗಿದೆ, ಇಂತಹವರಿಂದಲೇ ಮಂದಿರದ ಸೌಂದರ್ಯ ಹಾಳಾಗುತ್ತಿರುವುದು ಅಂದುಕೊಳ್ಳುತ್ತಾ ಚಪ್ಪಲಿ ಕಳಚಿಟ್ಟು ದೇವಸ್ಥಾನದ ಒಳಹೊಕ್ಕು ದೇವರ ಪ್ರತಿಮೆಯ ಮುಂದೆ ನಿಂತು ಕೈ ಮುಗಿದಳು. ಮೆಟ್ಟಿಲಿಳಿಯುವಾಗ ಅರೆ! ಹೌದಲ್ಲಾ, ಇಲ್ಲೇ ಯಾರನ್ನಾದರೂ ಮಾತನಾಡಿಸಿದರೆ ಕಥೆ ಸಿಗಲೂಬಹುದು. ಆದರೆ ಮಾತನಾಡಿಸುವುದಾದರೂ ಯಾರನ್ನು? ಅವರ ಬಟ್ಟೆ, ವೇಷಗಳನ್ನು ನೋಡುವಾಗಲೇ ವಾಕರಿಕೆ ಬರುತ್ತದೆ. ಇನ್ನು ಕೂತು ಕಥೆ ಕೇಳುವುದಾದರೂ ಹೇಗೆ? ಆದರೆ ತನಗೀಗ ಕಥೆ ಅನಿವಾರ್ಯ. ಸ್ವಲ್ಪ ಕಷ್ಟವಾದರೂ ಸರಿ, ಅಡ್ಜಸ್ಟ್ ಮಾಡಿಕೊಳ್ಳೋಣ ಅಂದುಕೊಳ್ಳುತ್ತಾ ಸುತ್ತ ದೃಷ್ಟಿಸಿದಳು. ಇದ್ದುದರಲ್ಲೇ ಚಪ್ಪಲಿ ಕಾಯುವ ಮುದುಕನೇ ವಾಸಿ ಅನ್ನಿಸಿ ಪೂಜಾ ಆ ಮುದುಕನ ಬಳಿ ಬಂದು ಕೂತು ನಿಧಾನವಾಗಿ ಮಾತಿಗೆಳೆದಳು. ಮೊದ ಮೊದಲು ಅವರು ಇವಳ ಕಡೆ ಗಮನವನ್ನೇ ಕೊಡದಿದ್ದರೂ ನಂತರ ತನ್ನ ಮೌನದ ಚಿಪ್ಪೊಡೆದು ಕಥೆ ಹೇಳಲು ಶುರುವಿಟ್ಟುಕೊಂಡರು.

'ಆರು ಹೆಣ್ಣು ಮಕ್ಕಳ ನಂತರ ಹರಕೆಯ ಫಲವಾಗಿ ಮನೆಗೆ ಏಳನೇ ಮಗುವಾಗಿ ಹುಟ್ಟಿದವನು ನಾನು. ಹುಟ್ಟುತ್ತಲೇ ಅಕ್ಕಂದಿರ ರೂಪದಲ್ಲಿ ಆರು ಅಮ್ಮಂದಿರ ಪಡೆದ ಅದೃಷ್ಟವಂತ. ನಮ್ಮವ್ವಂಗೆ ಮಗ ಓದು ಬರಹ ಕಲ್ತು ದೊಡ್ಮನ್ಸ' ಆಗ್ಲಿ ಅನ್ನುವ ಆಸೆ. ನಾನೋ ನಾಲ್ಕರಲ್ಲೇ ನಾಲ್ಕು ಬಾರಿ ಡುಮ್ಕಿ ಹೊಡೆಯುವಷ್ಟು ಬುದ್ಧಿವಂತ. 'ಗೇಯ್ದು ತಿನ್ನೋ ಕಾಲ ಮುಗ್ದೋಗಿ ಬೋ ವರ್ಸ ಆಯ್ತು ಕಣ್ ಮಗಾ, ಅದ್ನೇ ನಂಬ್ಕೊಂಡು ನಾವು ಗೆದ್ಲು ಹತ್ತಿದ್ದು ಸಾಕು, ನೀನಾದ್ರೂ ನಾಲ್ಕಕ್ಷರ ಕಲ್ತು ದೊಡ್ಡೋನಾಗು' ಅಂತ ಆಗಾಗ ಹೇಳುತ್ತಲೇ ಇದ್ದಳು. ಅದರ ಫಲವೇನೋ ಎಂಬಂತೆ ಅಂತೂ ಇಂತೂ ಊರಿಗೊಬ್ಬನೇ ಆಗಿ ಏಳನೇ ಕ್ಲಾಸ್ ಪಾಸಾಗಿ ಪಕ್ಕದೂರಿನ ಹೈಸ್ಕೂಲ್ ಸೇರಿಕೊಂಡೆ. ಹೊಸ ಊರು, ಹೊಸ ಪರಿಚಯ, ಹೊಸ ಗೆಳೆತನ ನನ್ನಲ್ಲಿ ಬದಲಾವಣೆಯ ಗಾಳಿ ಬೀಸಿತ್ತೋ ಏನೋ, ಡುಮ್ಕಿ ಹೊಡೆಯುವ ಚಾಳಿ ಬಿಟ್ಟು ಮೂರೇ ವರ್ಷದಲ್ಲಿ ಹೈಸ್ಕೂಲ್ ಮುಗಿಸಿ ಕಾಲೇಜಿಗೆ ಕಾಲಿಟ್ಟೆ.

ಅಷ್ಟು ಹೊತ್ತಿಗಾಗುವಾಗ ಅಪ್ಪ, ಅಕ್ಕಂದಿರ ಮದುವೆ ಬಾಣಂತನ ಅಂತೆಲ್ಲಾ ಕೈ ಖಾಲಿ ಮಾಡಿಕೊಂಡಿದ್ದ. ಅಪ್ಪನ ಬಳಿ ಮುಂದಿನ ಓದಿಗಾಗಿ ದುಡ್ಡು ಕೇಳುವಂತಿರಲಿಲ್ಲ. ಕೇಳಿದರೂ ಕೊಡಲು ಅವನಲ್ಲೇನೂ ಉಳಿದಿರಲಿಲ್ಲ. ಆದ್ರೆ ಅವ್ವನಿಗೆ ನನ್ನ 'ದೊಡ್ಮನ್ಸ' ಮಾಡುವ ಆಸೆ ಇನ್ನೂ ಕಮರಿರಲಿಲ್ಲ. ಅವರಿವರ ಕೈಕಾಲು ಹಿಡಿದು, ಕಾಡಿ ಬೇಡಿ, ಅಪ್ಪನ ಕಣ್ಣು ತಪ್ಪಿಸಿ ಕಾಳು ಕಡ್ಡಿ ಮಾರಿ ನನಗೆ ಹಣ ಹೊಂದಿಸಿ ಕೊಡುತ್ತಿದ್ದಳು. ಇಷ್ಟಾದರೂ ಪದವಿಯ ಹೊತ್ತಿಗಾಗುವಾಗ ಅಮ್ಮ ಕೊಡುತ್ತಿದ್ದ ದುಡ್ಡು 'ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ' ಯಂತಾಗುತ್ತಿತ್ತಷ್ಟೆ. ಹಾಗಾಗಿ ನನ್ನ ಅಲ್ಪ ಖರ್ಚನ್ನು ತೂಗಿಸಿಕೊಳ್ಳಲು ದುಡಿಮೆ ಅನಿವಾರ್ಯವಾಯಿತು. ಕಾಲೇಜು ಪಕ್ಕದಲ್ಲಿದ್ದ ದಿನಸಿ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡೆ. ಹಗಲು ಓದು, ರಾತ್ರಿ ದುಡಿಮೆ. ಅಂತೂ ಮೂರು ವರ್ಷಗಳ ಬಳಿಕ ಇಡೀ ಊರಿಗೆ ಡಿಗ್ರಿ ಪಡೆದ ಮೊದಲಿಗನಾಗಿ ಪದವಿಯೊಂದಿಗೆ ಊರು ಸೇರಿದೆ.

ಊರ ತಲೆ ಬಾಗಿಲಲ್ಲೇ ಅವ್ವ 'ದೊಡ್ಮನ್ಸ' ಆಗಿದ್ದ ಮಗನನ್ನು ಆರತಿ ಎತ್ತಿ ಸ್ವಾಗತಿಸಿದ್ದಳು. ಊರ ಪೂರ್ತಿ ಹಬ್ಬದ ವಾತಾವರಣ. ನಾನು ನಾಲ್ಕು ಸಲ ಡುಮ್ಕಿ ಹೊಡೆದ ಪ್ರೈಮರಿ ಶಾಲೆಯಲ್ಲಿ ನನಗೆ ಸನ್ಮಾನವೂ ಆಯ್ತು. ಅವ್ವ ಹೊಸ ಹುಟ್ಟು ಪಡೆದಂತೆ ನನ್ನ ಪದವಿಯ ಬಗ್ಗೆ ಊರಿಡೀ ಡಂಗುರ ಸಾರುತ್ತಲೇ ಇದ್ದಳು. ಆದರೆ ಇವೆಲ್ಲಾ ಮೂರು ದಿನಗಳ ಸಂಭ್ರಮ, ಮಗ ಊರಿಗ ಆಗುತ್ತಿದ್ದಂತೆ ಈ ಸಂಭ್ರಮವೂ ಹಳತಾಗುತ್ತದೆ ಅನ್ನುವ ಸತ್ಯ ಗೊತ್ತಿದ್ದುದರಿಂದಲೋ ಏನೋ ಅಪ್ಪ ಮಾತ್ರ ನನಗೆ ಮದುವೆ ಮಾಡುವ ಲೆಕ್ಕಾಚಾರದಲ್ಲಿದ್ದ.

ಅವ್ವ ಆಗಲೂ 'ನೀ ಇವನ್ನೆಲ್ಲಾ ಅಚ್ಕೊಂಡು ಬ್ಯಾಸ್ರ ಮಾಡ್ಕೋಬೇಡ ಕಣ್ ಮಗಾ' ಎಂದು ನನ್ನ ಮತ್ತೆ ಓದೋಕೆ ಕಳುಹಿಸಿದ್ದಳು. ಹಗಲಿನ ಓದು, ರಾತ್ರಿಯ ದುಡಿತ ಅಂತೆಲ್ಲಾ ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಸ್ನಾತಕೋತ್ತರ ಪದವಿಯೂ ಮುಗಿದೇ ಹೋಯಿತು. ನನ್ನ ಅದೃಷ್ಟವೇನೋ ಎಂಬಂತೆ ಓದಿದ ಕಾಲೇಜಲ್ಲೇ ಉಪನ್ಯಾಸಕ ಹುದ್ದೆಯನ್ನೂ ಗಿಟ್ಟಿಸಿಕೊಂಡೆ. ಕೆಲಸಕ್ಕಿದ್ದ ಅಂಗಡಿಯವರ ಮಗಳನ್ನೇ ಪ್ರೀತಿಸಿ ಎಲ್ಲರ ಸಮ್ಮುಖದಲ್ಲಿ ಮದುವೆಯೂ ಆದೆ.

ಹೆಂಡತಿಯೇನೋ ಒಳ್ಳೆಯವಳೇ. ಆದ್ರೆ ಮದುವೆಯಾಗಿ ಊರಲ್ಲಿದ್ದ ನನ್ನನ್ನು ಬೆಂಗಳೂರಿನ ತಳಕು ಬಳುಕು ಸೆಳೆಯತೊಡಗಿತ್ತು. ಕೆಲಸದ ನೆಪ ಹೇಳಿ ಅಪ್ಪನನ್ನು ಒಪ್ಪಿಸಿ ಮತ್ತೆ ಬೆಂಗಳೂರಿಗೆ ಹೊರಡುವ ತಯಾರಿ ನಡೆಸಿದೆ. ಅವ್ವ, ಮಗ ಸೊಸೆಯನ್ನು ಬಾಯ್ತುಂಬಾ ಹರಸಿ ಕಳುಹಿಸಿಕೊಟ್ಟಳು.

ಬೆಂಗಳೂರಿಗೆ ಹೋದ ಮೇಲೆ ಮತ್ತೆ ಅವ್ವ, ಅಪ್ಪ ನೆನಪಾಗಲಾರಂಭಿಸಿದರು. ಅವರು ಪಟ್ಟ ಕಷ್ಟ, ಅನುಭವಿಸಿದ ಅವಮಾನಗಳು ಮತ್ತೆ ಮತ್ತೆ ಕಾಡಲಾರಂಭಿಸಿದವು. ಒಂದು ಭಾನುವಾರ ಅವರಿಬ್ಬರನ್ನೂ ಕರೆದೊಯ್ಯಲು ಮತ್ತೆ ಊರಿಗೆ ಬಂದು ಬಲವಂತವಾಗಿ ಅವರಿಬ್ಬರನ್ನು ಬೆಂಗಳೂರಿನ ಕಾರು ಹತ್ತಿಸಿದೆ. ಆದರೆ ತಲೆ ಎತ್ತಿದಷ್ಟೂ ಎತ್ತರಕ್ಕಿರುವ ಕಟ್ಟಡಗಳು, ಹಡಗಿನಂತಹ ಕಾರುಗಳು, ತಮ್ಮೂರಿನಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗೂ ಸೇರದಷ್ಟು